ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - CHM. ಫೋನ್ : 114

8ನೇ ವರ್ಷ 4ನೇ ಸಂಚಿಕೆ ಕೊಪ್ಪ 10-9-1989 ಭಾನುವಾರ ಬೆಲೆ 50 ಪೈಸೆ

ಏಲಕ್ಕಿ ಬೆಳೆಗಾರರಿಗೆ ಸಬ್ಸಿಡಿ ಮೈಲುತು

ಕೊಪ್ಪ : ಈಚಿನ ತೀವ್ರ ಮಳೆ–ಬಿರುಗಾಳಿಯಿಂದ ದೊಡ್ಡ ಪ್ರಮಾಣದಲ್ಲಿ ಏಲಕ್ಕಿ ಬೆಳೆಗೆ ಹರಡಿರುವ ಶಿಲೀಂಧ್ರ ರೋಗದ ಹತೋಟಿಗಾಗಿ ಸಂಬಾರ ಮಂಡಳಿಯು ಏಲಕ್ಕಿ ಬೆಳೆಗಾರರರಿಗೆ ಮೈಲುತುತ್ತವನ್ನು ಸರಬರಾಜು ಮಾಡುತ್ತಿದ್ದು, ಶೇ. 50 ರಷ್ಟು ಅಥವಾ ಕೆ.ಜಿ.ಗೆ 13 ರೂ.ಯಂತೆ ಸಹಾಯ ಧನ ನೀಡಲಾಗುತ್ತದೆ. ಕ್ಷೇತ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೇ ದಿನಾಂಕ. 15-9-89.

ಹಳೆಯ ಮತ್ತು ನಿರುಪಯುಕ್ತ ತೋಟಗಳಲ್ಲಿ ಮರು ಗಿಡ ನೆಡುವಿಕೆಗೆ ಮಂಡಳಿಯು ಹೆಕ್ಟೇರಿಗೆ 3750 ರೂ. ಗಳಂತೆ ಸಹಾಯ ಧನ ನೀಡುತ್ತಿದೆ.

ಮೇಲ್ಕಂಡ ಮತ್ತು ಇನ್ನಿತರ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಅರ್ಜಿ ಫಾರಂಗಳಿಗಾಗಿ ಮಂಡಳಿಯ ಕ್ಷೇತ್ರಾಧಿಕಾರಿಗಳನ್ನು ಸಂಪರ್ಕಿಸಬಹುದು.

'ಕುದುರೆಮುಖ ರಾಷ್ಟ್ರೀಯ ಉದ್ಯಾನ'ದ ಬಗ್ಗೆ ಮತ್ತೆ ಊಹಾಪೋಹ, ರೈತರಲ್ಲಿ ಆತಂಕ

ಕೊಪ್ಪ : 'ಕುದುರೆಮುಖ ರಾಷ್ಟ್ರೀಯ ಉದ್ಯಾನ' ಯೋಜನೆಯ ಬಗ್ಗೆ ಈಗ ಹುಟ್ಟೊತ್ತೆ ಊಹಾಪೋಹಗಳು ಕೇಳಿ ಬರತೊಡಗಿದ್ದು, ಈ ಪ್ರದೇಶದ ರೈತರು ಜಮೀನು–ಮನೆ ಅಭಿವೃದ್ಧಿ ಬಗ್ಗೆ ದಿಕ್ಕುಗಾಣದವರಾಗಿದ್ದಾರೆ.

1987ರ ಸೆಪ್ಟೆಂಬರ್ 24ರಂದೇ ರಾಜ್ಯ ಸತ್ರದಲ್ಲಿ ಈ ಬಗ್ಗೆ ಪ್ರಕಟಣೆ ಹೊರಟಿರುವಂತೆ, ಈ ಅಭಯಾರಣ್ಯದ ವ್ಯಾಪ್ತಿಗೆ ಮೂಡಿಗೆರೆ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳ ಸಂಗಮ ಪ್ರದೇಶಗಳೂ ಸೇರಿದಂತೆ 1 ಲಕ್ಷ 62 ಸಾವಿರ ಎಕರೆ ಭೂಮಿ ಒಳಪಡಲಿರುವುದಾಗಿ ಈಗಾಗಲೇ ತಿಳಿದಿದೆ.

ಈ ಯೋಜನೆಗೆ ಸಂಬಂಧಪಟ್ಟ ಸಿಬ್ಬಂದಿ ವರ್ಗದ ಕೆಲವರು ಕಳಸಕ್ಕೆ ಬಂದಿದ್ದು, ಈ ಪ್ರದೇಶದ ರೈತರು ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಡಿರೆಂದು ತಿಳಿಸುತ್ತಿದ್ದಾರೆಂದು ಕೊಪ್ಪ ತಾ॥ ಜನತಾ ಪಕ್ಷದ ಅಧ್ಯಕ್ಷರೂ ಮೇಗೂರಿನಲ್ಲಿ ದೊಡ್ಡ ಕಾಫಿ–ಅಡಿಕೆ ಹಿಡುವಳಿ ಹೊಂದಿರುವ ಮನೆತನದವರೂ ಆದ ತಲವಾನೆ ಪ್ರಕಾಶ್ ತಿಳಿಸಿದ್ದಾರೆ.

ಈ ಪ್ರದೇಶಗಳ ಜನ ವಸತಿಗಳನ್ನು ತೆರವು ಮಾಡಿಸಲಾಗುವುದೆ? ಇವೇ ಮುಂತಾದ ವಿಚಾರಗಳ ಬಗ್ಗೆ ಸರ್ಕಾರದ ಪರವಾಗಿ ರೈತರಿಗೆ ಕೂಡಲೇ ಎಲ್ಲಾ ವಿಚಾರಗಳನ್ನೂ ತಿಳಿಸಿ, ರೈತರ ಅನಿಶ್ಚಿತತೆ, ಆತಂಕಗಳಿಗೆ ತೆರೆ ಎಳೆಯಬೇಕೆಂದು ಜನತಾ ಪಕ್ಷ ಒತ್ತಾಯಿಸಿದೆ.

ಅಡಿಕೆ ಬೆಳೆಗಾರರಿಗೆ ಸಾಲ, ಪರಿಹಾರ ನೀಡಲು ಗೋವಿಂದ ಗೌಡರ ಆಗ್ರಹ

ಕೊಪ್ಪ : ತಾ॥ ಜನತಾ ದಳ ಅಧ್ಯಕ್ಷ ಎ. ವಿ. ಆನಂದ ರಾಮ ಭಟ್ಟರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ, ಪಕ್ಷದ ಹರಿಜನ/ಗಿರಿಜನ ಸಮಿತಿಯನ್ನೂ ವಿವಿಧ ಮಂಡಲ ಸಮಿತಿಗಳನ್ನೂ ರಚಿಸಲಾಯಿತು

ಸಭೆಯಲ್ಲಿ ಭಾಗವಹಿಸಿದ್ದ ಮಾಜಿ ಸಚಿವ ಗೋವಿಂದ ಗೌಡರು ಮಾತನಾಡಿ, ಈ ಸಲದ ಭಾರಿ ಮಳೆ–ಗಾಳಿಯಿಂದಾಗಿ ತೀವ್ರ ನಷ್ಟಕ್ಕೊಳಗಾಗಿರುವ ಅಡಿಕೆ ಬೆಳೆಗಾರರಿಗೆ ಸಾಕಷ್ಟು ಪರಿಹಾರವನ್ನೂ, ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನೂ ತಕ್ಷಣ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಮಂಡಲಗಳ ವ್ಯಾಪ್ತಿಯಲ್ಲಿ ಪಕ್ಷವನ್ನು ಬಲಪಡಿಸುವಂತೆ ಸಮಿತಿಗಳಿಗೆ ಕರೆಕೊಟ್ಟರು. ಪ್ರಧಾನ ಕಾರ್ಯದರ್ಶಿ ಎಚ್. ಎಸ್. ಕಳಸಪ್ಪ ವಂದಿಸಿದರು.

ಬಣಕಲ್‌ನಲ್ಲಿ ಕದ್ದ ಕಾರು ಕೊಪ್ಪದಲ್ಲಿ ಪತ್ತೆ

ಕೊಪ್ಪ : ಬಣಕಲ್‌ನಲ್ಲಿ ಆ. 24 ರಂದು ಕಳುವಾಗಿದ್ದ ಸಿಆರ್‌ಎಕ್ಸ್ 1971 ನಂಬರಿನ ಪ್ರಿಮಿಯರ್ ಪದ್ಮಿನಿ ಕಾರು 26 ರಂದು ಕೊಪ್ಪದಲ್ಲಿ ಪತ್ತೆಯಾಗಿದೆ.

ಅಂದು ಜಲಜಾಕ್ಷಮ್ಮ ಕಲ್ಯಾಣ ಮಂಟಪದಲ್ಲಿ ಮದುವೆ ನಡೆಯುತ್ತಿದ್ದು, ಅಲ್ಲಿ ವಾರಸುದಾರರಿಲ್ಲದೆ ಬಿಡಲಾಗಿದ್ದ ಈ ಕಾರನ್ನು ಪೋಲೀಸರು ಸಂಜೆ ವಶಕ್ಕೆ ತೆಗೆದುಕೊಂಡರು ಇದಕ್ಕೆ ಮೊದಲು ದಫೇದಾರ್‌ಗಳಾದ ಗಂಗಪ್ಪ ಮತ್ತು ವೀರಪ್ಪ ಅವರುಗಳು ಗಸ್ತಿನಲ್ಲಿದ್ದಾಗ ಈ ಕಾರು ಅವರಿಗೆ ಎದುರಾಗಿತ್ತು. ಮೂಡಿಗೆರೆಯಿಂದ ಬಂದಿದ್ದ ವೈರ್‌ಲೆಸ್ ಸಂದೇಶದ ವಿವರಗಳ ಹೋಲಿಕೆಯಿಂದ (ನಂಬರ್ ಪ್ಲೇಟಿನಲ್ಲಿ '971' ಮಾತ್ರ ಇದ್ದರೂ) ಅದನ್ನು ಅವರು ನಿಲ್ಲಿಸಲು ಯತ್ನಿಸಿದರೆ ಅದು ನಿಲ್ಲದೆ ಹೋಗಿತ್ತು.

ಅವರುಗಳು ಡ್ರೈವರ್‌ನ ಚಹರೆ ನೀಡಿದ್ದನ್ನನುಸರಿಸಿ ಮೂಡಿಗೆರೆ, ಬಣಕಲ್ ಪೋಲೀಸರು ಆರೋಪಿಗಳನ್ನು ಬಂಧಿಸಿದ್ದಾರೆಂದು ಹೇಳಲಾಗಿದೆ. ಕಾರನ್ನು ನ್ಯಾಯಾಲಯದ ಮೂಲಕ ವಾರಸುದಾರರಿಗೆ ನೀಡಲಾಯಿತು

ಕಾಫಿ ಬೆಳೆಗಾರರ ವಿಚಾರ ಸಂಕಿರಣ

ಜಯಪುರ : ಭಾರತ ಸರ್ಕಾರದ ಉದ್ಯಮವಾದ ಪೈರೈಟ್ಸ್, ಫಾಸ್ಫೇಟ್ಸ್ ಅಂಡ್ ಕೆಮಿಕಲ್ಸ್ ಹಾಗೂ ಸಹ್ಯಾದ್ರಿ ಬೆಳೆಗಾರರ ಸಂಘಗಳ ಸಹಯೋಗದಲ್ಲಿ 12-9-89 ಮಂಗಳವಾರ ಇಲ್ಲಿನ ಪ್ರೌಢಶಾಲಾ ಸಭಾಂಗಣದಲ್ಲಿ **ಕಾಫಿ ಬೆಳೆಗಾರರ ವಿಚಾರ ಸಂಕಿರಣ** ಏರ್ಪಡಿಸಲಾಗಿದೆ. ಬೆಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಕುಪ್ರಸಿದ್ಧ ಗಂಧ ಕಳ್ಳನ ಬಂಧನ

ಕೊಪ್ಪ: ಇಲ್ಲಿಗೆ ಸಮೀಪದ ಗುಬ್ಬಗದ್ದೆಯ ಜೆರ್ವಿ ರಾಡ್ರಿಗಸ್ ಎಂಬ ಕುಪ್ರಸಿದ್ಧ ಗಂಧ ಕಳ್ಳ ಆ. 3ರಂದು ತನ್ನ ಸೂಟ್‌ಕೇಸ್‌ನಲ್ಲಿ ಗಂಧದ ತುಂಡುಗಳೊಂದಿಗೆ ನ. ರಾ. ಪುರ ಪೋಲೀಸರಿಗೆ ಸೆರೆ ಸಿಕ್ಕಿದ್ದು, ಆತನನ್ನು ಶಿವಮೊಗ್ಗ ಜೈಲಿನಲ್ಲಿ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿತ್ತು.

ಇಲ್ಲಿನ ಹೆಸ್ರಿ ತವರ ಎಂಬ ವ್ಯಕ್ತಿಯ ಜಾಮೀನಿನಲ್ಲಿ ಈಗ ಅವನ ಬಿಡುಗಡೆಯಾಗಿರುವುದಾಗಿ **ತಿಳಿದು ಬಂದಿದೆ. ಕೆಲವು** ದಿನಗಳ ಹಿಂದಷ್ಟೇ ಜೆರ್ವಿಯನ್ನು ಕಳ್ಳಬಟ್ಟಿ ಪ್ರಕರಣದಲ್ಲಿ ಅಬ್ಕಾರಿ ಸಿಬ್ಬಂದಿ ಬಂಧಿಸಿದ್ದರು.

ಕಳ್ಳಬಟ್ಟಿ ಮತ್ತು ಗಂಧದ ಕಳ್ಳ ಸಾಗಣೆಯೇ ಈತನ ಜೀವನೋಪಾಯವಾಗಿದ್ದು, ಇವನ ಈ ವೃತ್ತಿಗೆ ಸಹಕಾರಿಯಾಗಿಲ್ಲದ ಗುಬ್ಬಗದ್ದೆಯ ಬಡ ರೈತರಿಗೆ "ನಿಮ್ಮ ಜಾಗದಲ್ಲಿ ಗಂಧ ಬಚ್ಚಿಟ್ಟು ಹಿಡಿಸುವುದಾಗಿ" ಬೆದರಿಕೆ ಹಾಕುತ್ತಿದ್ದಾನೆಂದು ಅವರುಗಳು ಅರಣ್ಯ ಮತ್ತು ಪೋಲೀಸ್ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ವಿದ್ಯಾರ್ಥಿಗಳ ಮಾನವೀಯತೆ

ಹರಿಹರಪುರ : ಇಲ್ಲಿನ ಕಿರಿಯ ಕಾಲೇಜಿನಲ್ಲಿ 24 ವರ್ಷಗಳಿಂದ ನಾಲ್ಕನೇ ದರ್ಜೆ ನೌಕರನಾಗಿದ್ದ ಎ.ಕೆ. ಚಂದ್ರಪ್ಪ ಅವರು ಆ. 26ರಂದು ಹಠಾತ್ತಾಗಿ ಹೃದಯಾಘಾತದಿಂದ ನಿಧನರಾದ ಪ್ರಯುಕ್ತ, ಕಾಲೇಜಿನಲ್ಲಿ ನಡೆಯಬೇಕಿದ್ದ ಗಣಪತಿ ಉತ್ಸವವನ್ನು ರದ್ದುಗೊಳಿಸಿದ ವಿದ್ಯಾರ್ಥಿಗಳು, ಅದಕ್ಕಾಗಿ ಸಂಗ್ರಹಿಸಿದ್ದ 2 ಸಾವಿರ ರೂ.ಗೂ ಹೆಚ್ಚಿನ ನಿಧಿಯನ್ನು ದಿ॥ ಚಂದ್ರಪ್ಪನವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೀಡಿದ್ದಾರೆ

ವಿದ್ಯಾರ್ಥಿಗಳ ಈ ಅಪರೂಪದ ಮಾನವೀಯತೆ ಅನುಕರಣೀಯವಾಗಿದೆ.

ಸಾಮಾಜಿಕ ಬೆಸುಗೆ

ಇಲ್ಲಿನ ರಾಷ್ಟ್ರೋತ್ಥಾನ ಬಳಗ ಪ್ರತಿ ವರ್ಷದಂತೆ ಈ ವರ್ಷವೂ ಕೃಷ್ಣಾಷ್ಟಮಿಯಂದು ನಡೆಸಿದ ಬಾಲಗೋಪಾಲ, ಯಶೋದಾ–ಕೃಷ್ಣ ಮತ್ತು ರಸ ಪ್ರಶ್ನೆ ಸ್ಪರ್ಧೆಗಳಲ್ಲಿ ದಲಿತರು, ಅಲ್ಪ ಸಂಖ್ಯಾತರೂ ಸೇರಿದಂತೆ ಎಲ್ಲ ಧಾರ್ಮಿಕ ಗುಂಪು–ವರ್ಗಗಳವರೂ ಸಾಮರಸ್ಯದಿಂದ ಬೆರೆತು ಬಹುಮಾನಗಳನ್ನು ಕೂಡ ಗಳಿಸಿದರು.

ಕಾನೂನು ಮತ್ತು ಪ್ರಜೆಗಳು

ಕಿರಿಯ ಕಾಲೇಜಿನಲ್ಲಿ ಸೆ. 2ರಂದು ಸ್ಥಳೀಯ ಪೋಲೀಸ್ ಠಾಣಾಧಿಕಾರಿ ಟಿ. ಆರ್. ಮಂಜುನಾಥಯ್ಯ ಅವರು ವಿದ್ಯಾರ್ಥಿಗಳನ್ನು ಕುರಿತು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿ ನೀಡಿ ಪ್ರಶ್ನೆಗಳಿಗೆ ಉತ್ತರಿಸಿದರು.

(ವರದಿ: ಅನಿಲ್ ಕುಮಾರ್)

ಗುಡ್ಡೇಕೊಪ್ಪ ದರೋಡೆ ತಂಡದ ಪತ್ತೆ : ಹಲವರ ಬಂಧನ, ಒಡವೆ ವಶ

ಕೊಪ್ಪ : ತೀರ್ಥಹಳ್ಳಿ ತಾ॥ ಕೋಡ್ಲುರಿಗೆ ಸಮೀಪದ ಗುಡ್ಡೇಕೊಪ್ಪ ಕೃಷ್ಣಮೂರ್ತಿ ಎಂಬವರ ಮನೆಯಲ್ಲಿ ಆ. 12ರ ರಾತ್ರಿ ಸುಮಾರು 50 ಸಾವಿರ ರೂ. ನಗ–ನಗದು ದರೋಡೆ ನಡೆಸಿದ್ದ ತಂಡವನ್ನು ತೀರ್ಥಹಳ್ಳಿ ಸರ್ಕಲ್ ಇನ್‌ಸ್ಪೆಕ್ಟರ್ ಕಿಶನ್ ಪ್ರಸಾದ್, ಮಾಳೂರು ಸಬ್‌ಇನ್ಸ್‌ಪೆಕ್ಟರ್ ಆನಂದ್ ಮತ್ತು ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ

ತೀರ್ಥಹಳ್ಳಿ ಸಂತೆಕೊಪ್ಪದ ಖಾದರ್ ಎಂಬವನ ನೇತೃತ್ವದಲ್ಲಿ ತೀರ್ಥಹಳ್ಳಿ ಮತ್ತು ಗುಡ್ಡೇಕೊಪ್ಪದ ಕೆಲವರು ಮತ್ತು ಮಂಗಳೂರಿನ ಕೆಲ ಯುವಕರು ಒಟ್ಟು 9-10 ಜನ ಸೇರಿ ಈ ಕೃತ್ಯ ಎಸಗಿದ್ದು, ಖಾದರ್ ಮತ್ತು ಇತರ ಕೆಲವರನ್ನು ಈಗಾಗಲೇ ಬಂಧಿಸಲಾಗಿದೆ. ಮಂಗಳೂರು ಮತ್ತಿತರ ಕಡೆಗಳಲ್ಲಿ ಮಾರಲಾಗಿರುವ ಒಡವೆಗಳನ್ನು ಪತ್ತೆ ಹಚ್ಚಿ ವಶಪಡಿಸಿಕೊಳ್ಳಲಾಗುತ್ತಿದೆ ಎಂದು ಪೋಲೀಸ್ ಮೂಲಗಳು ತಿಳಿಸಿವೆ ತನಿಖೆ ಮತ್ತು ಬಂಧನದ ಕಾರ್ಯಾಚರಣೆ ಮುಂದುವರಿಯುತ್ತಿದೆ.

ಆ. 24ರಂದು ಶಿವಮೊಗ್ಗ ಎಸ್ಪಿ ಕೆಂಪಯ್ಯನವರು ಗುಡ್ಡೇಕೊಪ್ಪಕ್ಕೆ ಭೇಟಿ ನೀಡಿ, ಗುಮಾನಿಯ ಮೇಲೆ ಸ್ಥಳೀಯ ಒಬ್ಬರನ್ನು ವಶಕ್ಕೆ ತೆಗೆದುಕೊಂಡು ಪ್ರಶ್ನಿಸಲಾಗಿ ಖಾದರ್ ಮತ್ತು ತಂಡದ ಸುಳಿವು ಸಿಕ್ಕಿತೆನ್ನಲಾಗಿದೆ. ಈ ತಂಡ ಈ ಪ್ರದೇಶದಲ್ಲಿ ವ್ಯಾಪಕವಾಗಿ ಗಂಧ ಕಳ್ಳ ಸಾಗಣೆ ವ್ಯಾಪಾರ ನಡೆಸುತ್ತಿತ್ತೆಂದು ತಿಳಿದು ಬಂದಿದೆ.

ದಲಿತರು, ಅಲ್ಪ ಸಂಖ್ಯಾತರೂ ಸೇರಿದಂತೆ ರಾಜ್ಯ ಮಟ್ಟದಲ್ಲಿ ಎಲ್ಲ ಹಿಂದುಳಿದವರ ಬಲಿಷ್ಠ ಸಂಘಟನೆಗೆ ಯತ್ನ

ವಿದ್ಯೆ, ಹಣ, ಉದ್ಯೋಗ, ರಾಜಕೀಯ- ಈ ಎಲ್ಲದರಲ್ಲೂ ಹಿಂದುಳಿದಿರುವುದಲ್ಲದೆ ಸಾಮಾಜಿಕವಾಗಿಯೂ 'ಕೀಳ ಜಾತಿಗಳು' ಎನ್ನಿಸಿಕೊಂಡಿರುವ ಎಲ್ಲಾ ಹಿಂದುಳಿದ ವರ್ಗಗಳವರನ್ನೂ, ಜೊತೆಗೆ ದಲಿತರು ಮತ್ತು ಅಲ್ಪ ಸಂಖ್ಯಾತರನ್ನೂ ಒಟ್ಟು ಸೇರಿಸಿ ಬಲಿಷ್ಠವಾದ ಸಂಘಟನೆಯೊಂದನ್ನು ಕಟ್ಟುವ ದೃಢವಾದ ಪ್ರಯತ್ನವೊಂದು ರಾಜ್ಯ ಮಟ್ಟದಲ್ಲಿ ಆರಂಭವಾಗಿದೆ.

'ದಲಿತ'ರೆಂದರೆ ಸಾಮಾಜಿಕ ಮತ್ತು ಆರ್ಥಿಕ—ಈ ಎರಡೂ ರೀತಿಯಲ್ಲಿ ತುಳಿತಕ್ಕೊಳಗಾದವರು ಎಂಬ ಪರಿಕಲ್ಪನೆಯೊಂದಿಗೆ ಅಂಥ ಎಲ್ಲ ಬಡ ಜನತೆಯನ್ನೂ ಒಂದುಗೂಡಿಸಿ ಹೋರಾಟಕ್ಕಿಳಿಸುವ ಪ್ರಯತ್ನವನ್ನು ಸಾಕಷ್ಟು ಪ್ರಜ್ಞಾಪೂರ್ವಕವಾಗಿಯೇ ಮಾಡುತ್ತ ಬಂದಿರುವ ಕರ್ನಾಟಕ ದಲಿತ ಸಂಘರ್ಷ ಸಮಿತಿ ಈ ನಿಟ್ಟಿನಲ್ಲಿ ಈಗಾಗಲೇ ಅಲ್ಲಲ್ಲಿ ಸ್ವಲ್ಪ ಮಟ್ಟಿನ ಯಶಸ್ಸುಗಳಿಸಿದೆ. ಇಂಥ ಎಲ್ಲ ಜಾತಿ, ವರ್ಗ, ಜನಾಂಗಗಳು ಹಾಗೂ ಶವಗಳಂತೆಯೇ ಹಿಂದುಳಿದಿರುವಿಕೆಯನ್ನೂ, ಅಕಿಂಚನವನ್ನೂ ಅನುಭವಿಸುತ್ತಿರುವ ಅಲ್ಪ ಸಂಖ್ಯಾತ ಸಮುದಾಯಗಳು ಮತ್ತು ದಲಿತರು ಒಟ್ಟಾಗಿ, ತಮ್ಮೊಳಗಿನ ಭೇದ ಭಾವಗಳನ್ನು ಬದಿಗಿಟ್ಟು, ಸಾಮೂಹಿಕವಾಗಿ ತಮ್ಮ ಹಿತ ರಕ್ಷಣೆಗಾಗಿ ಹೋರಾಡಲು ಮುಂದಾಳತ್ವ ನೀಡಬಲ್ಲ ಒಕ್ಕೂಟವೊಂದನ್ನು ಸ್ಥಾಪಿಸಲು ಈಗ ದ.ಸಂ.ಸ. ಮುಂದಾಗಿದೆ.

ಇಂಥ ಸಂಘಟನೆಯೊಂದರ ಅಗತ್ಯವನ್ನು ಮನಗಂಡವರೆಲ್ಲರೂ ಒಟ್ಟು ಕಲೆತು, ವಿಚಾರ ವಿನಿಮಯ ಮಾಡಿ ಕಾರ್ಯಕ್ರಮ ರೂಪಿಸಲು ಸಾಧ್ಯವಾಗುವಂತೆ ಆಗಸ್ಟ್ 27ರಂದು ಬೆಂಗಳೂರಿನಲ್ಲಿ 'ದಲಿತರ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿಚಾರ ಸಂಕಿರಣ'ವನ್ನು ದ.ಸಂ.ಸ. ಏರ್ಪಡಿಸಿತ್ತು.

ಹಿಂದುಳಿದ ವರ್ಗಗಳ 2ನೇ ಆಯೋಗದ ಖ್ಯಾತಿಯ, ನಿವೃತ್ತ ನ್ಯಾಯಾಧೀಶರಾದ ವೆಂಕಟಸ್ವಾಮಿಯವರು ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತ, ಇಂದು ಪ್ರತಿಯೊಂದು ಜಾತಿ–ಜನಾಂಗಗಳಲ್ಲೂ ನಾಯಕರೆನ್ನಿಸಿಕೊಂಡವರು ತಾವು ಮಾತ್ರ ರಾಜಕೀಯವಾಗಿ ಮುಂದೆ ಬರುವುದನ್ನಷ್ಟೇ ನೋಡುತ್ತಾರೆ. ತಮ್ಮವರನ್ನು ಕಿಂಚಿತ್ತಾದರೂ ಮುಂದೆ ತರಬೇಕೆಂಬುದಿಲ್ಲ ಎಂದು ವಿಷಾದಿಸಿದರು.

ಕೂಲಿಗಾರ, ಕೃಷಿಕ, ಕುಶಲಕರ್ಮಿ ಮುಂತಾದ ಎಲ್ಲ ದುಡಿಮೆಗಾರರಿಗೂ ಹೊಟ್ಟೆ ಮೊದಲನೆಯದಾದ ಹೊಟ್ಟೆಯ ಚಿಂತೆಯೇ ಬಗೆಹರಿಯದ್ದರಿಂದ ವಿದ್ಯೆಯ ಕಡೆಗೆ ಅವರು ಗಮನವನ್ನೇ ಕೊಡುತ್ತಿಲ್ಲ. 14 ವರ್ಷದವರೆಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸದಿದ್ದರೆ ಶಿಕ್ಷೆ ಎಂದು ಕಾನೂನಿದೆ. ಆದರೆ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಹೀಗಾದರೆ ಸಮಾಜದ ನಮ್ಮ ಹೊಣೆ ತೀರಿತೆ? ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಬೇಕು. 'ಹಸಿದವನೊಬ್ಬನಿಗೆ ಒಂದು ಮೀನು ಕೊಡುವುದಕ್ಕಿಂತ ಮೀನು ಹಿಡಿವ ವಿದ್ಯೆ ಕಲಿಸು' ಎಂದು ಚೀನೀ ಗಾದೆಯೊಂದಿದೆ. ಹಾಗೆ, ವ್ಯರ್ಥವಾಗಿ ಸರ್ಕಾರದ ಮುಂದೆ ಕೈಯೊಡ್ಡದೆ, ನಾವು ನಮ್ಮ ಜೀವನ ನಿರ್ವಹಣೆಯ ಸಾಗಿಸುವಂತಾಗಬೇಕು ಎಂದು [illegible] ಆಶಿಸಿದರು.

[illegible] ಒಕ್ಕೂಟಗಳು, ಸಭೆ–ಸಮಾರಂಭಗಳು ಕೇವಲ ಚುನಾವಣೆಗಳಿಗಾಗಿ ನಡೆದರೆ ಫಲವಿಲ್ಲ. ಈ ವಿಚಾರಗಳೂ ಸಹ ಇಲ್ಲಿ ಮಾತ್ರ ಕೇಳಿ ಮರೆಯುವುದಕ್ಕಲ್ಲ. ದಿನವೂ ಊಟ ಬೇಕಾಗುವಂತೆ, ಸದಾ ಕಾಲವೂ ಈ ವಿಚಾರಗಳು ನಮ್ಮ ತಲೆಯಲ್ಲಿ ಗುಂಯ್‌ಗುಡುತ್ತ, ಅದಕ್ಕನುಗುಣವಾದ ಕ್ರಿಯೆಗೆ ನಮ್ಮನ್ನು ಪ್ರೇರೇಪಿಸಬೇಕು ಎಂದು ಅವರು ಯುವ ಜನತೆಗೆ ಕರೆ ನೀಡಿದರು.

ಸಂವಿಧಾನದ ಮೂಲಕವೇ ಮೀಸಲಾತಿಯನ್ನು ಅಂಬೇಡ್ಕರ್ ಏರ್ಪಡಿಸಿದರು. ಆದರೇನು? ಕೇಂದ್ರ ಸರ್ಕಾರದ ಮಟ್ಟದಲ್ಲೇ ಸಾಕಷ್ಟು ಮೀಸಲಾತಿ ಸಿಗುತ್ತಿಲ್ಲ. ಹಿಂದುಳಿದ ವರ್ಗಗಳಿಗಂತೂ ಇಲ್ಲವೇ ಇಲ್ಲ. ನೆಹರೂ ಕಾಲದಿಂದಲೂ ಇದೇ ನಡೆದಿದೆ. ಹಿಂದುಳಿದ ವರ್ಗಗಳ ಬಗೆಗಿನ ಕಾಕಾ ಕಾಲೇಲ್ಕರ್ ವರದಿ, ಮಂಡಲ್ ವರದಿ ಎಲ್ಲ ಏನಾಗಿವೆ? ಎಂದು ಅವರು ಪ್ರಶ್ನಿಸಿದರು.

ಈ ವಿಚಾರದಲ್ಲಿ ಕರ್ನಾಟಕ ಸ್ವಲ್ಪ ಭಿನ್ನವೆಂದೇ ಹೇಳಬೇಕು. 1914ರಿಂದ, ಮಹಾರಾಜರ ಕಾಲದಿಂದಲೂ ಈ ಬಗ್ಗೆ ಕೆಲಸ ನಡೆದಿದೆ. ಸರ್ ಎಂ. ವಿಶ್ವೇಶ್ವರಯ್ಯನವರು ವಿರೋಧಿಸಿದರೂ ಅಳುಕದೆ ಮಹಾರಾಜರು 1920ರಲ್ಲಿ ದೃಢ ನಿಲುವು ತಳೆದು ಮೀಸಲಾತಿ ಜಾರಿಗೆ ತಂದರು. ಹಾವನೂರ್ ಆಯೋಗ ನೇಮಿಸಿದ ದಿ| ದೇವರಾಜ ಅರಸು ಕೂಡ, ಅದರ ವರದಿಯ ಅನುಷ್ಠಾನಕ್ಕೆ ದೃಢ ಸಂಕಲ್ಪ ಮಾಡಿ, ಹಾವನೂರರನ್ನೇ ಕಾನೂನು ಮಂತ್ರಿಯಾಗಿ ಮಾಡಿದರು. ಹೀಗಾಗಿ ಇಂದು ಇಷ್ಟಾದರೂ ಸಾಧನೆ ಕರ್ನಾಟಕದಲ್ಲಿ ಸಾಧ್ಯವಾಗಿದೆ ಎಂದರು.

ತಮ್ಮ ಅಧ್ಯಕ್ಷತೆಯ 2ನೇ ಆಯೋಗದ ವರದಿಯಲ್ಲಿ ಗುರುತಿಸಿದ್ದ ಹಿಂದುಳಿದ ಜಾತಿ-ಕೋಮುಗಳು ಯಾವುದೇ ರೀತಿಯಲ್ಲಿ ನೋಡಿದರೂ ತೀರಾ ಹಿಂದುಳಿದಂಥವೇ ಆಗಿವೆ. ಅವರಿಗೆಲ್ಲ ಮೀಸಲಾತಿ ನೀಡುವ ಸೂತ್ರ ರೂಪಿಸಿ, ಒಟ್ಟು ಮೀಸಲಾತಿಯ ಪ್ರಮಾಣ ಕಡಿಮೆಯಾಗುತ್ತಾ ಹೋಗುವಂತೆ ಅತ್ಯಂತ ವೈಜ್ಞಾನಿಕವಾಗಿ ಶಿಫಾರ್ಸು ಮಾಡಲಾಗಿತ್ತು. ಸಂವಿಧಾನ ಕೂಡ ಇದನ್ನೇ (ಹೀಗೆ ಕ್ರಮೇಣ ಮೀಸಲಾತಿ ಕಡಿಮೆಯಾಗುತ್ತಾ ಹೋಗುವುದನ್ನೇ) ಆಶಿಸಿದೆ. ಆಳವಾದ ಅಧ್ಯಯನ, ವಿವರವಾದ ಮಾಹಿತಿ–ಅಂಕಿ ಅಂಶ ಸಂಗ್ರಹಣೆಗಳೊಂದಿಗೆ 80 ಸಲಹೆಗಳನ್ನು ಮಾಡಲಾಗಿತ್ತು. ಆದರೆ ಅವುಗಳನ್ನು ಯಾರೂ ಓದಲಿಲ್ಲ, ಪರಾಮರ್ಶಿಸಲಿಲ್ಲ. ಅದರ ಬದಲು ಶೇ. 92ರಿಂದ 95ರಷ್ಟು 'ಮೀಸಲಾತಿ' ನೀಡಿಕೆಯಂಥ ಹಾಸ್ಯಾಸ್ಪದ ಸನ್ನಿವೇಶವನ್ನು ಸರ್ಕಾರ ಸೃಷ್ಟಿಸಿದೆ ಎಂದು ಅತ್ಯಂತ ನೋವಿನಿಂದ ಹೇಳಿದ ಅವರು, ಯಾವುದೇ ಆಯೋಗದ ವರದಿಯನ್ನು ಬೇಕಾದಷ್ಟು ಬದಲಾವಣೆ ಮಾಡಿ; ಆದರೆ ಅನುಷ್ಠಾನಕ್ಕಂತೂ ತನ್ನಿ. ಅದರಿಂದ ಅಷ್ಟಾದರೂ ಉಪಯೋಗವಾಗುತ್ತದೆ ಎಂದು ನೊಂದು ನುಡಿದರು.

ಇನ್ನು 50 ಅಥವಾ 100 ವರ್ಷಗಳ ನಂತರವಾದರೂ ಈ ಸಮಾಜದಲ್ಲಿ, ಯಾವುದೇ ಭೇದಭಾವ ತಾರತಮ್ಯಗಳಿಲ್ಲದೆ ಜೀವನ ಧಾರೆ ಸುಲಲಿತವಾಗಿ ಪ್ರವಹಿಸುವಂತಾಗಬೇಕು ಎಂದು ಆಶಿಸಿದ ವೆಂಕಟಸ್ವಾಮಿಯವರ ಭಾವಪೂರ್ಣ, ವಿಚಾರಪೂರ್ಣ ಮಾತುಗಳು ರಾಜ್ಯದಾದ್ಯಂತದ 400ಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಮಂತ್ರ ಮುಗ್ಧರನ್ನಾಗಿ ಮಾಡಿದವು.

ವಿಚಾರ ಸಂಕಿರಣದ ಆಶಯ ಭಾಷಣ ಮಾಡಿದ ಜಿ. ಬಸವಣ್ಣಪ್ಪ ನೂರಾರು ಸಂಖ್ಯೆಯಲ್ಲಿರುವ ಹಿಂದುಳಿದ ಜಾತಿಗಳಿಗೆ ಪರಿಣಾಮಕಾರಿಯಾದ ಮೀಸಲಾತಿ, ರಾಜಕೀಯ ಪ್ರಾತಿನಿಧ್ಯಗಳಾಗಲಿ, ಪ್ರಭಾವಿ ನಾಯಕರಾಗಲಿ ಇಲ್ಲದೆ ತೀರಾ ದುಃಸ್ಥಿತಿಯಲ್ಲಿರುವುದನ್ನು ಮನ ಮುಟ್ಟುವಂತೆ ಬಣ್ಣಿಸಿದರು.

ನಮ್ಮ ರಾಜ್ಯದ ಜನ ಸಂಖ್ಯೆಯ ಸುಮಾರು ಶೇ. 30 ರಷ್ಟಾಗುವ ಲಿಂಗಾಯಿತರು, ಒಕ್ಕಲಿಗರು, ಬ್ರಾಹ್ಮಣರು ಸುಮಾರು ಶೇ. 60ಕ್ಕೂ ಹೆಚ್ಚು ಭಾಗ ಅಧಿಕಾರ ಸ್ಥಾನಗಳನ್ನೂ ರಾಜಕೀಯ ಅಧಿಕಾರವನ್ನೂ ಹಿಡಿದಿದ್ದಾರೆ. ಸ್ವಾತಂತ್ರ್ಯಾನಂತರ ರಾಷ್ಟ್ರ ಮಟ್ಟದಲ್ಲೂ ಅನುಕೂಲವಂತ ಬಲಿಷ್ಠ ಶೂದ್ರ ಜಾತಿಗಳು (ಒಕ್ಕಲಿಗರು, ಲಿಂಗಾಯಿತರಂತೆಯೇ ರೆಡ್ಡಿ, ರಜಪೂತ, ಭೂಮಿಹಾರ್, ಬನಿಯಾ, ಇತ್ಯಾದಿ) ತಮ್ಮ ಸಂಖ್ಯಾ ಬಲದಿಂದ ಚುನಾವಣೆಯ ಮೂಲಕ ಗಳಿಸಿಕೊಂಡ ಪ್ರಾಬಲ್ಯದಿಂದಾಗಿ ಅಧಿಕಾರ ಶಾಹಿಯ ಉನ್ನತ ಸ್ಥಾನಗಳ ಮೇಲೂ ಲಗ್ಗೆ ಹಾಕಿದ್ದಾರೆ. ಅದಕ್ಕೆ ಮೊದಲು ಅವೆಲ್ಲ ಬ್ರಾಹ್ಮಣರಿಗೇ ಸೀಮಿತವಾಗಿದ್ದವು.

ಆದರೆ ಬಿಡಿಬಿಡಿಯಾಗಿ ಜನಸಂಖ್ಯೆಯ ಶೇ. 1ಕ್ಕೂ ಕಮ್ಮಿ ಇರುವ ಈ ನೂರಾರು ಹಿಂದುಳಿದ ಜಾತಿಗಳವರು ಯಾವ ಕ್ಷೇತ್ರದಲ್ಲೂ ತಮ್ಮ ಒಬ್ಬ ಅಭ್ಯರ್ಥಿಯನ್ನು ಚುನಾವಣೆಯಲ್ಲಿ ಗೆಲ್ಲಿಸುವುದು ಹಾಗಿರಲಿ, ಬೇರೊಬ್ಬ ಅಭ್ಯರ್ಥಿಯನ್ನು ಸೋಲಿಸುವ ಶಕ್ತಿಯನ್ನೂ ಹೊಂದಿಲ್ಲದಿರುವುದರಿಂದ ಅವರಿಗೆ ಯಾವ ಸವಲತ್ತು–ಸ್ಥಾನಮಾನಗಳೂ ಸಿಗುತ್ತಿಲ್ಲ. ಯಾವ ಆಯೋಗದ ವರದಿ ಬಂದರೂ ಈ ಜಾತಿಗಳಿಗೆ ಪ್ರಯೋಜನವಾಗುತ್ತಿಲ್ಲ. ಏಕೆಂದರೆ ಈ ಜಾತಿಗಳನ್ನು ಗುಂಪುಗಳಾಗಿ ವಿಂಗಡಿಸಿ ಸೌಲಭ್ಯ ಕಲ್ಪಿಸುವುದರಿಂದ ಆಯಾ ಗುಂಪಿನಲ್ಲಿರುವ ಬಲಿಷ್ಠ ಜಾತಿಗಳೇ ಆ ಸೌಲಭ್ಯಗಳನ್ನೆಲ್ಲ ಕಬಳಿಸುತ್ತಿವೆ.

(3ನೇ ಪುಟಕ್ಕೆ)

ಪದ್ಯ ದಂಕಣ

ಪ್ರಕೃತ

ನಾಡಿಗೆ ವರವು ತಾ ಪ್ರಕೃತಿ ಸಂಪತ್ತು,
ನಾಡಿನಾ ಸಿರಿಗೆ ಈಗೊದಗಿದೆ ವಿಪತ್ತು.
ಕಾಡಿರಲು ನಾಡೆಂದು ಹೇಳುವರು ಎಲ್ಲ
ಆದರೂ ಕಡಿತಲೆಗೆ ಕೊನೆಯೆಂಬುದಿಲ್ಲ !
ಕಡಿಕಡಿದು ಸೊರಗುತಿದೆ ಬಹುಮೂಲ್ಯ ಕಾಡು
ಆಗುತಿದೆ ನಮ್ಮಿಂದ ಎಲ್ಲ ಸುಡುಗಾಡು
ಕಾಡು ಕಡಿವ ಮನುಜಗೆ ಕವಿದಿದೆ ಭ್ರಾಂತಿ,
ಕದಡುತಿದೆ ಇದರಿಂದ ಪ್ರಕೃತಿಯಾ ಶಾಂತಿ.
ನಡೆಯುತಿದೆ ನಮ್ಮಿಂದ 'ಹೊಸನಾಡ ನಿರ್ಮಾಣ'
ಆಗುತಿದೆ ಮರೆಯಿಂದ ಪ್ರಕೃತಿಯಾ ನಿರ್ವಾಣ
ಅಭ್ಯುದಯ ದಾಹದಲಿ ವನಸಿರಿಯ ನಾಶ,
ಸ್ವಾರ್ಥಸಾಧಕರಿಂದ ಪರಿಸರ ವಿನಾಶ.
ಸ್ವಾರ್ಥಿಗಳ ದಾಳಿಯಲಿ ನಲುಗುತಿದೆ ಕಾಡು
ಹೇಳಲಾಗದು ಬರುವ ಪೀಳಿಗೆಯ ಪಾಡು.
ಕೇಳುವುದು ಆಗಾಗ ವನಮಹೋತ್ಸವ ಮಂತ್ರ
ಇದು ಪ್ರಕೃತಿ ಮಾತೆಯ ಕಣ್ಣೊರೆಸುವಾ ತಂತ್ರ
ಪ್ರಕೃತಿ ಮಾತೆಯಲೆಮಗೆ ಇರೆ ನೈಜ ವಾತ್ಸಲ್ಯ,
ಅವಳ ಬಯಕೆಯ ಪ್ರಗತಿ ಕಾಣುವುದು ಸಾಫಲ್ಯ.

—ಟಿ.ಕೆ. ನಂಜುನಾಥ, ತಲವಾನೆ.

ವನ ಮಹೋತ್ಸವ

ನೆಟ್ಟು ಗಿಡವ ಬೆಳೆಸುವಾ
ಮಾಡಿ ವನ ಮಹೋತ್ಸವ
ಸಿಕ್ಕ ಬೀಜ ಹೆಕ್ಕಿ ಇಡು
ಮಳೆಯು ಬೀಳೆ ಮಣ್ಣಲಿಡು
ಸಸಿಯು ಬೆಳೆಯೆ ತಂಪಲಿಡು
ಕಾಪು ನೀಡಿ ಬೆಳೆಯ ಬಿಡು
ಮನೆಯ ಸುತ್ತ ಹಲಸು ಮಾವು
ವರುಷಕೆಂಟು ಗಿಡವ ಬೆಳೆಸು
ಗಿಡವು ನೀನು ಜತೆಗೆ ಬೆಳೆದು
ನನ್ನ ವನವಿದೆಂದು ಹಾಡು
ರೈತನಿಂದ ನಮ್ಮ ಬಾಳು
ಆತ ಬೆಳೆಯೆ ಬೇಕು ಮಳೆಯು
ಮಳೆಯು ಬರಲು ಕಾಡು ಬೇಕು
ಬದುಕಿಗಾಗಿ ವನವ ಬೆಳೆಸು

ಎಚ್ ಎಸ್. ಜಯಲಕ್ಷ್ಮಿ.
ಬಂಡಿಗಡಿ.

ಎಲ್ಲ ಹಿಂದುಳಿದವರ ಬಲಿಷ್ಠ ಸಂಘಟನೆಗೆ ಯತ್ನ

(2ನೇ ಪುಟದಿಂದ)

ಅಧಿಕಾರ, ಸವಲತ್ತುಗಳನ್ನು ಅನುಭವಿಸುತ್ತಿರುವ ವರ್ಗಗಳು ತಾವಾಗಿಯೇ ಈ ಜಾತಿಗಳಿಗೆ ಅವರ ಪಾಲನ್ನು ಬಿಟ್ಟುಕೊಡಲಾರವು. ಅಂಥ ಬದಲಾವಣೆಯ ಮನಸ್ಸು ಬರಬೇಕಾದರೂ ಬಲಿಷ್ಠ ಹೋರಾಟ ಬೇಕು. ಅದಕ್ಕಾಗಿ ಈ ಜಾತಿಗಳೆಲ್ಲ ಸಂಘಟಿತವಾಗಿ, ದಲಿತ ಮತ್ತು ಅಲ್ಪಸಂಖ್ಯಾತರೊಡನೆ ಒಟ್ಟುಗೂಡಿದರೆ ಸಾಮಾಜಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಒಂದು ಪ್ರಬಲ ಮತ್ತು ಸ್ವತಂತ್ರ ಶಕ್ತಿಯಾಗಬಹುದು-ಎಂದು ಬಸವಣ್ಯಪ್ಪ ಅಭಿಪ್ರಾಯ ಪಟ್ಟರು.

ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಮತ್ತು ದಲಿತರ ಸಮಾನತೆಯ ಚಳುವಳಿಗಳಿಂದಾಗಿ ನಮ್ಮದು ರಾಷ್ಟ್ರಕ್ಕಿಂತ ಮುನ್ನಡೆದ ರಾಜ್ಯ ಎಂದ ನ್ಯಾಯವಾದಿ ಪ್ರೊ॥ ರವಿವರ್ಮ ಕುಮಾರ್ ಪರಿಶಿಷ್ಟ ಜಾತಿ/ಬುಡಕಟ್ಟುಗಳಿಗೆ ಶಿಕ್ಷಣ, ಸರ್ಕಾರಿ ಸೇವೆ ಮತ್ತು ಚುನಾವಣೆ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಸಂವಿಧಾನವು ನೀಡಿದ್ದು, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವವರಿಗೆ ಚುನಾವಣಾ ಕ್ಷೇತ್ರಗಳ ಮೀಸಲಾತಿ ನೀಡಿಲ್ಲವೆಂದು ತಿಳಿಸಿದರು.

1955ರಲ್ಲಿ ಕಾಕಾ ಕಾಲೇಲ್ಕರ್ ಸಮಿತಿ ವರದಿಯು ದೇಶಾದ್ಯಂತ 2000 ಹಿಂದುಳಿದ ಜಾತಿಗಳನ್ನು ಗುರುತಿಸಿ ಅವರಿಗೆ ಅವರ ಸಂಖ್ಯೆಗನುಗುಣವಾಗಿ ಮೀಸಲಾತಿಯನ್ನು ಶಿಫಾರ್ಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಈ ಬಗ್ಗೆ ನಿಷ್ಕ್ರಿಯವಾಗಿತ್ತು. ಕರ್ನಾಟಕದಲ್ಲಿ ಈ ಬಗ್ಗೆ ಆಂದೋಲನ ನಡೆದು 1977ರಲ್ಲಿ ಹಾವನೂರ್ ವರದಿ ಬಂದ ನಂತರವೇ ಮೀಸಲಾತಿ ಲಭ್ಯವಾದುದು. ಈ ಮಧ್ಯೆ 1961ರಿಂದಲೂ 'ಸೂಕ್ತ ವ್ಯವಸ್ಥೆ' ಮಾಡುವುದಾಗಿ ಹೇಳುತ್ತಲೇ ಬಂದ ಸರ್ಕಾರಗಳು ಅಷ್ಟು ಕಾಲವೂ ಎಲ್ಲಾ ಹಿಂದುಳಿದ ಜಾತಿಗಳನ್ನೂ ವಂಚಿತರನ್ನಾಗಿಸಿದ್ದವು. ಇದೀಗ ವೆಂಕಟಸ್ವಾಮಿ ಆಯೋಗದ ವರದಿಯನ್ನು ಮೂಲೆಗೆ ತಳ್ಳಿ ತನ್ನದೇ ವಿಕಲ್ಪಿತ ಮೀಸಲಾತಿ ಸೂತ್ರವನ್ನು ಜಾರಿಗೆ ತಂದ ಹೆಗಡೆಯ ಜನತಾ ಸರ್ಕಾರ ಮತ್ತೊಮ್ಮೆ ಇಂಥದೇ ಸುದೀರ್ಘ ವಂಚನೆಯ ಶಕೆಗೆ ನಾಂದಿ ಹಾಡಿದೆ ಎಂದು ಟೀಕಿಸಿದರು.

ಈ ಸೂತ್ರದನ್ವಯ, ಲಿಂಗಾಯಿತರಂಥ ಕೆಲವು ಬಲಿಷ್ಠ ಜಾತಿಗಳಿಗೂ ಎರಡೆರಡು ಗುಂಪುಗಳಡಿ ದುಪ್ಪಟ್ಟು (ಡಬಲ್) ಮೀಸಲಾತಿ ಸಿಕ್ಕರೆ, ಎಷ್ಟೋ ಅರ್ಹ ಹಿಂದುಳಿದ ಜಾತಿಗಳಿಗೆ ಶೈಕ್ಷಣಿಕ ಮೀಸಲಾತಿಯೂ ಸಿಕ್ಕಿಲ್ಲ ಎಂದ ಅವರು ಇನ್ನೂ ಹಲವು ನ್ಯೂನತೆಗಳನ್ನು ವಿವರಿಸಿದರು. ಈ ಸೂತ್ರದ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ದಾಖಲಿಸಿರುವ ದಾವೆಗಳು ಇನ್ನೂ ವಿಚಾರಣೆಗೆ ಬರದಿರುವ ಬಗ್ಗೆ ವಿಷಾದಿಸಿದರು.

'ಈ ಸಮಸ್ಯೆಯನ್ನು ಹೋರಾಟದಿಂದಲೇ ಬಗೆಹರಿಸಲು ಸಾಧ್ಯವಿಲ್ಲ, ಅಧಿಕಾರ ಹಿಡಿದೇ ಸಾಧಿಸಬೇಕು' ಎಂಬ ಕೆಲ ಗೆಳೆಯರ ಅಭಿಪ್ರಾಯ ಸರಿಯಲ್ಲ. ಜನಾಂದೋಲನದಿಂದ ಅಭಿಪ್ರಾಯ ರೂಪಿಸದಿದ್ದರೆ ಈಗಿನಂಥದೇ (ವೆಂಕಟಸ್ವಾಮಿ ಆಯೋಗದ ವರದಿಯಂತೆ) ಸ್ಥಿತಿಯಾಗುತ್ತದೆ. ಆದ್ದರಿಂದ ಉದ್ದೇಶಿತ ಒಕ್ಕೂಟ ಕೇವಲ ರಾಜಕೀಯ ವೇದಿಕೆ ಮಾತ್ರವಲ್ಲದೆ ಹೋರಾಟದ ವೇದಿಕೆಯೂ ಆಗಬೇಕು. ಸಾಮಾಜಿಕ ನ್ಯಾಯಕ್ಕಾಗಿ ಅವಿರತವಾಗಿ ಹೋರಾಡಲು ಕೂಡಲೇ ಕಾರ್ಯಪ್ರವೃತ್ತವಾಗಬೇಕು ಎಂದು ಅವರು ಆಶಿಸಿದರು.

ಈ ಸಮಾಜದ ಎಲ್ಲಾ ಶೋಷಿತ ವರ್ಗಗಳೂ ಒಟ್ಟಾಗಿ ನ್ಯಾಯಕ್ಕಾಗಿ ಹೋರಾಡುವಂತಾಗಬೇಕೆಂಬ ಆಶಯ ಬಹಳ ಕಾಲದಿಂದ ಎಲ್ಲರ ಮನಸ್ಸಿನಲ್ಲೂ ಇದೆಯಾದರೂ, ಈಗ ಅದು ಕೈಗೂಡುವ ಆಶಾಕಿರಣ ಕಾಣುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಲೇಖಕಿ, ಪತ್ರಕರ್ತೆ ಬಾನು ಮುಷ್ತಾಕ್, ಈ ದೇಶದ ಜನಸಂಖ್ಯೆಯ ಸುಮಾರು ಶೇ. 11ರಷ್ಟಿರುವ ಮುಸ್ಲಿಮರು ಆರ್ಥಿಕವಾಗಿ ಬಡವರೂ, ವಿದ್ಯೆಯಲ್ಲಿ ಹಿಂದುಳಿದವರೂ, ರಾಜಕೀಯವಾಗಿ ರಾಷ್ಟ್ರೀಯವಾಗಿ ತಬ್ಬಲಿಗಳೂ ಆಗಿರುವುದಲ್ಲದೆ ಮಾನಸಿಕವಾಗಿ ಸಹ ತೀವ್ರವಾದ ಏಕಾಕಿತನ, ಆತಂಕಗಳಲ್ಲಿ ಮುಳುಗಿದ್ದಾರೆಂದು ಬಣ್ಣಿಸಿದರು.

ಮೂಲ ಬಂಡವಾಳ, ಸ್ವತ್ತು, ಕೌಶಲ್ಯ, ಮಾರ್ಗದರ್ಶನಗಳ ಕೊರತೆಯಿಂದಾಗಿ ಹೆಚ್ಚಿನ ಮುಸ್ಲಿಮರು ಯಾವುದೇ ಉದ್ಯಮಗಳಲ್ಲಿ ತೊಡಗದೆ, ಬಹುತೇಕ ಗುಜರಿ, ಚಿಂದಿ, ಹಳೇ ಹರಕು-ಮುರುಕು, ಲಾಳ, ಹಣ್ಣು-ತರಕಾರಿ ಮಾರಾಟ-ಇಂಥ ಅನಿಶ್ಚಿತ ವೃತ್ತಿಗಳಲ್ಲೇ ದಿನ ದೂಡುತ್ತಿದ್ದಾರೆಂದರು.

ಭಾರತೀಯ ಮುಸ್ಲಿಮರು ಹೊರಗಿನಿಂದ ಆಮದಾದವರಲ್ಲ. ಇಲ್ಲಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಬದಲಾವಣೆಗಾಗಿ ತುಡಿದವರು. ಕಾಂಗ್ರೆಸ್‌ನ ನಟನೆ, ದ್ರೋಹ ಗೊತ್ತಾಗಿಯೂ ಅಧಿಕಾರ ಪಕ್ಷವಾಗಿ ಅದರ ಅವಲಂಬನೆ ಬಿಡಲಾರದಾಗಿದ್ದಾರೆ. ಮುಸ್ಲಿಮರ ಯಾವನೇ ನಾಯಕ ತನ್ನ ಜನಾಂಗದವರ ಸಮಸ್ಯೆಗಳಿಗಾಗಿ ಶ್ರಮಿಸತೊಡಗಿದೊಡನೆ 'ಕೋಮುವಾದಿ'ಯೆಂಬ ಹಣೆಪಟ್ಟಿಗೆ ಸಿಕ್ಕಿಕೊಂಡು ನಿಷ್ಕ್ರಿಯನಾಗಬೇಕಾಗುತ್ತದೆ. ಹೀಗಾಗಿ ಈ ಜನತೆಗೆ ಈ ದೇಶದ ವ್ಯವಸ್ಥೆಯ ಯಾವುದೇ ಅಂಗದ (ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ) ಬಗ್ಗೆ ಭರವಸೆಯಿಲ್ಲವಾಗಿದೆ. 'ತಾವಾಯಿತು ತಮ್ಮ ಬದುಕಾಯಿತು' ಎಂದು ಅದನ್ನೂ ಚಿಪ್ಪಿನೊಳಗೇ ಇರಲು ಹೆಣಗುತ್ತಾರೆ. ಅದಕ್ಕೂ ಮೀರಿದ ಒತ್ತಡ ಅತಿಯಾದಾಗ ಜೀವದ ಹಂಗು ತೊರೆದು ಹೋರಾಡುತ್ತಾರೆ. ಸಹಬಾಳ್ವೆ ಅವರಿಗೂ ಬೇಕು; ಆದರೆ ಅದು ಅವರ ಅಸ್ತಿತ್ವಕ್ಕೇ ಸಂಚಕಾರ ತರುವುದನ್ನು ಅವರು ಸಹಿಸಲಾರರು ಎಂದು ಎಳೆಎಳೆಯಾಗಿ ವಿಶ್ಲೇಷಿಸಿದರು.

'ಸಾರೇ ಜಹಾಂ ಸೇ ಅಚ್ಛಾ, ಹಿಂದೂಸ್ತಾನ್ ಹಮಾರಾ' ಗೀತೆಯ ಕರ್ತೃ ಡಾ॥ ಇಕ್ಬಾಲ್‌ರ ಬದುಕನ್ನು ಉದಾಹರಿಸಿದ ಬಾನು ಮುಷ್ತಾಕ್, ಇಕ್ಬಾಲರು ಸಂಕುಚಿತ ಕೋಮು ಭಾವನೆಯ ಎದುರು ಭಾರತೀಯತೆಯನ್ನೂ ವಿಶ್ವಭ್ರಾತೃತ್ವವನ್ನೂ ಪ್ರತಿಪಾದಿಸಿದಾಗ್ಯೂ ಈ ದೇಶ ಅವರನ್ನು 'ಕೋಮುವಾದಿ' ಎಂದೇ ಹೆಸರಿಸಿತು; ಮುಸ್ಲಿಮರು ಅವರನ್ನು ಮುಸ್ಲಿಂ ಅಲ್ಲವೆಂದರು. ಇಕ್ಬಾಲ್‌ರ ಅಂತಿಮ ಬದುಕು ಅಶಾಂತಿಯ ಬೀಡಾಯಿತು ಎಂದು ಹೇಳಿ, ಅಲ್ಪಸಂಖ್ಯಾತರ ಧ್ವನಿ ಇಂದು ಮರಣ ಸನ್ನಿಹಿತವಾದ ಕ್ಷೀಣ ಧ್ವನಿಯಾಗಿದೆ. ಅದಕ್ಕೆ ತ್ರಾಣ ಬರಬೇಕಾದರೆ ದಲಿತರ ಮತ್ತು ಹಿಂದುಳಿದ ವರ್ಗಗಳ ಜೊತೆ ಸೇರಲೇಬೇಕು ಎಂದು ಪ್ರತಿಪಾದಿಸಿದರಲ್ಲದೆ, ಹಾಸನ ಜಿಲ್ಲೆಯಲ್ಲಿ ಮುಸ್ಲಿಮರ ಮೇಲೆ ಅನ್ಯಾಯ, ದೌರ್ಜನ್ಯಗಳು ನಡೆದಾಗ ಕೇವಲ ದ. ಸಂ. ಸ. ಮತ್ತು ರೈತ ಸಂಘಗಳ ಹೊರತು ಬೇರಾವ ರಾಜಕೀಯ ನಾಯಕರಾಗಲಿ ಅಧಿಕಾರಿ ವರ್ಗದವರಾಗಲಿ ನೆರವಿಗೆ ಬರದಿರುವುದನ್ನು ಉದಹರಿಸಿದರು.

ರಾಜ್ಯ ನಾಗರಿಕ ಹಕ್ಕುಗಳ ಸಮಿತಿಯ ಅಧ್ಯಕ್ಷರಾದ ಪ್ರೊ॥ ಹಸನ್ ಮನ್ಸೂರ್ ಮಾತನಾಡಿ, ಮಾನವನ ಸ್ವಾತಂತ್ರ್ಯ ಜನ್ಮಸಿದ್ಧವಾದುದು; ಅದು ಯಾವುದೇ ಕಾನೂನು ದಯಪಾಲಿಸಿದ ಹಕ್ಕಲ್ಲ. ಶೋಷಿತ, ಮರ್ದಿತ ಜನತೆಯ ಮೇಲೆ ಸಾಮೂಹಿಕ ದೌರ್ಜನ್ಯಗಳು ಮಾತ್ರವಲ್ಲದೆ, ಅವರ ಹೋರಾಟಗಳನ್ನು ಹತ್ತಿಕ್ಕಲು ಸರ್ಕಾರಿ ವ್ಯವಸ್ಥೆ ಕೂಡ ದಮನವನ್ನು ಹೆಚ್ಚಿಸುತ್ತಿರುವಾಗ, ಯಾವುದೇ ಜನಪರ ಸಂಘಟನೆಯ ಪ್ರತಿಯೊಬ್ಬ ಕಾರ್ಯಕರ್ತನೂ ಅಂತಿಮವಾಗಿ ನಾಗರಿಕ ಹಕ್ಕುಗಳ ಹೋರಾಟಗಾರನೇ ಆಗಬೇಕಾಗುತ್ತದೆಂದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿ ದೇವರಾಜ್ ಮಾತನಾಡಿ, ಮಹಾರಾಷ್ಟ್ರದಲ್ಲಿ ಕೂಡ ಈ ಹಿಂದೆ ಹಿಂದುಳಿದ ವರ್ಗಗಳ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಚಳುವಳಿ ಮಾಡಿದವರು ದಲಿತರೇ ಎಂಬುದನ್ನು ಸ್ಮರಿಸಿ, ಹಿಂದುಳಿದ ವರ್ಗದವರೆಲ್ಲರೂ ದಲಿತರ ಜೊತೆ ಭಾವನಾತ್ಮಕವಾಗಿ ಒಂದಾಗಲೇಬೇಕಿದೆ ಎಂದರು. ನಾವೆಲ್ಲ ಒಟ್ಟಾಗಿ, ನಮ್ಮ 'ಓಟು' ಸಾಮರ್ಥ್ಯವನ್ನು ಒಗ್ಗೂಡಿಸಿದರೆ ನಮ್ಮಗಳ ಏಳ್ಗೆಗಾಗಿ ನಮ್ಮದೇ ಸಮರ್ಥ ನಾಯಕತ್ವ ರೂಪಿಸಬಹುದೆಂದರು.

ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಪ್ರೊ॥ ಎಲ್. ಜಿ. ಹಾವನೂರ್ ತಮ್ಮ ಪ್ರಬುದ್ಧ ವಿಚಾರ ಧಾರೆಯಿಂದ ಪ್ರತಿನಿಧಿಗಳ ಮನಸ್ಸುಗಳನ್ನು ಮಂತ್ರ ಮುಗ್ಧವಾಗಿಸಿದರು. ಸ್ವಾತಂತ್ರ್ಯದಂತೆಯೇ ಸಮಾನತೆಯೂ ಪ್ರತಿಯೊಬ್ಬನ ಮೂಲಭೂತ ಹಕ್ಕು. ಜಾತಿ ಅಥವಾ ಧರ್ಮದ ಕಾರಣಕ್ಕಾಗಿ ಯಾವನೇ ವ್ಯಕ್ತಿಯ ಬಗ್ಗೆ ತಾರತಮ್ಯ ಇರಬಾರದು. ಆದ್ದರಿಂದ ಈ ವಿಚಾರ ಸಂಕಿರಣದ ಧ್ಯೇಯ 'ಎಲ್ಲರೂ ಸಮಾನರು' ಎಂದಿರುವುದು ಉಚಿತ ಎಂದು ಹಾವನೂರ್ ಹೇಳಿದರು.

ಮೇಲ್ಜಾತಿಗಳವರು ನಮ್ಮನ್ನು ಸಮಾನತೆಯಿಂದ ಕಾಣಲು ಸಿದ್ಧರಿಲ್ಲವಾದರೆ ನಾವೆಲ್ಲರೂ ಇಸ್ಲಾಂ ಅಥವಾ ಕ್ರೈಸ್ತ ಧರ್ಮವನ್ನು ಅನುಸರಿಸಲೆಂದು ಆಶಿಸುತ್ತಾರೋ? ಎಂದು ಪ್ರಶ್ನಿಸಿದ ಅವರು, ಎಲ್ಲ ಧರ್ಮಗಳಿಗಿಂತಲೂ 'ಮನುಷ್ಯ ಧರ್ಮ'ವೇ ಶ್ರೇಷ್ಠವೆಂದರು.

ಬ್ರಿಟಿಷರ ಕಾಲದಿಂದಲೂ ಸಹ ಮೇಲ್ಜಾತಿಗಳವರು ಹಿಂದುಳಿದವರನ್ನೂ ಧಾರ್ಮಿಕ ಅಲ್ಪಸಂಖ್ಯಾತರನ್ನೂ ವಂಚಿಸುತ್ತಾ ಬಂದ ಬಗೆಯನ್ನು ವರ್ಣಿಸಿದ ಅವರು, ಡಾ॥ ಅಂಬೇಡ್ಕರರು ಸಂವಿಧಾನದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ಉಳಿದ ಹಿಂದೂಗಳಿಗಿಂತ ಹೆಚ್ಚು ಸೌಕರ್ಯ ಕಲ್ಪಿಸಿರುವುದನ್ನು ಸಮರ್ಥಿಸಿದರು.

ಇಡೀ ದೇಶದ ಆರ್ಥಿಕ ಸಂಪನ್ಮೂಲಗಳೆಲ್ಲವೂ, ಜೊತೆಗೆ ಜೀವನೋಪಾಯಕ್ಕೆ ಅಗತ್ಯವಾದ ಭೂಮಿ, ಉದ್ಯಮ, ಉದ್ಯೋಗ, ಕಾರ್ಖಾನೆಗಳೆಲ್ಲವೂ ಕೆಲವೇ ಗುಂಪುಗಳಲ್ಲಿ ಕೇಂದ್ರೀಕೃತವಾಗಿರುವ ಇಂದಿನ ವ್ಯವಸ್ಥೆ ಮುಂದುವರಿಯಕೂಡದು. ರಾಷ್ಟ್ರದ ಸಂಪತ್ತು ಹಂಚಿಕೆಯಾಗಬೇಕು. ಪಟ್ಟಭದ್ರರ ವಿರುದ್ಧ, ಬಂಡವಾಳಶಾಹಿಯ ವಿರುದ್ಧ ಸಮಗ್ರ ಹೋರಾಟಕ್ಕೆ ಇಂಥ ಸಂಘಟನೆಗಳು ಸಿದ್ಧವಾಗಬೇಕು ಎಂದು ಕರೆ ನೀಡಿದರು.

1857ರ ಪ್ರಥಮ ಭಾರತ ಸಂಗ್ರಾಮದ ವೈಫಲ್ಯದ ನಂತರ ಬ್ರಿಟಿಷರ ನೇರ ಆಡಳಿತಕ್ಕೆ (ವೈಸ್‌ರಾಯ್ ಪದ್ಧತಿ) ನಮ್ಮಲ್ಲಿನ ಕೇವಲ ಶೇ. 4ರಷ್ಟಿದ್ದ ಭೂಮಾಲಿಕ-ಬಂಡವಾಳಶಾಹಿ-ಜಾತಿವಾದಿ ಪಟ್ಟಭದ್ರರೇ ಬೆಂಬಲವಾದವರು. ಆದರೆ ಬ್ರಿಟಿಷರು ಇವರಿಗೆ ಅಧಿಕಾರದಲ್ಲಿ ಪಾಲು ಕೊಡದೆ, ಹಿಂದುಳಿದವರಿಗೆ, ಅಸ್ಪೃಶ್ಯರಿಗೆ ಉತ್ತೇಜನ ಕೊಡತೊಡಗಿದ್ದೇ 1885ರಲ್ಲಿ ಕಾಂಗ್ರೆಸ್ ಸ್ಥಾಪನೆಗೆ ಪ್ರಬಲ ಕಾರಣ ಎಂದು ವಿಶ್ಲೇಷಿಸಿದರು.

1918ರಲ್ಲಿ ಮೈಸೂರು ಮಹಾರಾಜರು ಮಿಲ್ಲರ್ ಸಮಿತಿ ನೇಮಿಸುವ ಮೊದಲು ಇದ್ದಂಥದೇ ಪರಿಸ್ಥಿತಿ ಹಿಂದುಳಿದ ವರ್ಗಗಳ ಪಾಲಿಗೆ ಇಂದೂ ಎದುರಾಗಿದೆ. ನಮ್ಮ ದೇಶದಲ್ಲಿ ನ್ಯಾಯಾಂಗದಿಂದ ಯಾವುದೇ ಮೂಲಭೂತ ಸಮಸ್ಯೆ ಬಗೆಹರಿದುದಿಲ್ಲ. ಇದಕ್ಕಾಗಿ ಸಮಾನತೆಯ ಪ್ರಬಲ ಸಂಘಟನೆಯೇ ಬೇಕೆಂದು ಪ್ರತಿಪಾದಿಸಿದ ಹಾವನೂರ್, **ಮೀಸಲಾತಿಯ ಹಕ್ಕು ಎಷ್ಟರ ಮಟ್ಟಿಗೆ ಬೇಕೋ ಅಷ್ಟಕ್ಕೇ ಇಟ್ಟುಕೊಳ್ಳೋಣ. ಅದನ್ನು ಬಿಟ್ಟು, ಸ್ವಾಭಿಮಾನದಿಂದ ಬದುಕಲು ನಿಶ್ಚಯ ಮಾಡಿ—ಎಂದು ದಲಿತ/ಹಿಂದುಳಿದ ಸಮುದಾಯಗಳಿಗೆ ಕರೆ ಕೊಟ್ಟರು.**

ಈ ವರ್ಗಗಳನ್ನು [illegible] ಬಹುಮುಖ ಸಮಸ್ಯೆಗಳ ಬಗ್ಗೆ, [illegible]ಟ್ಟಿನ ಸಾಮಾಜಿಕ, ರಾಜಕೀಯ [illegible]ಗಳ ಬಗ್ಗೆ ಸಮಾವೇಶ ಚರ್ಚಿಸಿತು. [illegible]

(4ನೇ ಪುಟಕ್ಕೆ)

ಓದುಗರ ಪತ್ರಗಳು

ಬೇಜವಾಬ್ದಾರಿಯಲ್ಲವೆ ?

ಮಾನ್ಯರೆ,

ಕಳೆದ 3 ವರ್ಷದಿಂದ ಕೊಪ್ಪ ಪಟ್ಟಣದ ಸಾಮಾನ್ಯರಿಗೆ ಮನರಂಜನೆ ಒದಗಿಸುತ್ತಿದ್ದ ಪುರಭವನದ ಟಿ.ವಿ. ಕಳೆದ ವಾರ ಕಳ್ಳರ ಪಾಲಾಗಿದೆ. ಇದು ಎಂದೋ ಆಗಬೇಕಾಗಿದ್ದುದು ಇಂದು ಆಯಿತೆಂಬಂತಾಗಿದೆ ಏಕೆಂದರೆ ಸುಮಾರು 14 ಸಾವಿರ ರೂ. ಬೆಲೆ ಬಾಳುವ ಇದನ್ನು, ಕಾವಲಿಲ್ಲದೆ ಪುರಭವನದಲ್ಲಿ ಇಟ್ಟದ್ದು ಸರಿಯೆ ?

ನೆರೆಯ ಊರುಗಳಲ್ಲೆಲ್ಲ ಪುರಭವನಕ್ಕೆ ರಾತ್ರಿ ಕಾವಲು ವ್ಯವಸ್ಥೆಯಿರುವಾಗ ಇಲ್ಲಿ ಮಾತ್ರ ಇಂಥ ಭದ್ರತೆ ಒದಗಿಸದೆ ಹೋದುದು ಬೇಜವಾಬ್ದಾರಿತನವಲ್ಲವೆ ?

ಇನ್ನಾದರೂ ಕಾವಲು ವ್ಯವಸ್ಥೆಯೊಂದಿಗೆ ಪುನಃ ಟಿ.ವಿ. ಸೌಕರ್ಯವನ್ನು ಸಾರ್ವಜನಿಕರಿಗೆ ಒದಗಿಸಬೇಕಾಗಿ ಕೋರುತ್ತೇವೆ.

—ಸಾರ್ವಜನಿಕರು,
(ಐವರ ಸಹಿ ಇದೆ.) ಕೊಪ್ಪ

ಶ್ರೀನಿವಾಸ ಹೆಗ್ಗಡೆಯವರ ನಿಧನಕ್ಕೆ ಸಂತಾಪ

ಮಾನ್ಯರೆ,

ಬಸರಿಕಟ್ಟೆ, ಸಮೀಪದ ಸುಪ್ರಸಿದ್ಧ ಶಂಕರ ಕೋಡಿಗೆ ಸಮುದಾಯದ ಶ್ವೇತಗಿರಿ ಎಸ್ಟೇಟ್‌ನ ಪ್ರಗತಿ ಶೀಲ ತೋಟಗಾರಿಕೋದ್ಯಮಿಗಳೂ, ಗಣ್ಯ ವ್ಯಕ್ತಿಗಳೂ, ಸತ್ಕೃತಿಗಳಿಗೆ ನಿರಂತರ ಪ್ರೋತ್ಸಾಹಕರೂ, ಸರ್ವಜನಪ್ರಿಯರೂ ಆಗಿದ್ದ ಟಿ. ಆರ್. ಶ್ರೀನಿವಾಸ ಹೆಗ್ಗಡೆಯವರು ಈಚೆಗೆ ನಿಧನರಾಗಿದ್ದಾರೆಂಬ ಸುದ್ದಿ ದಿಗ್ಭ್ರಮೆಯುಂಟು ಮಾಡುವುದಾಗಿದೆ. ಈ ಮಹನೀಯರ ಅಗಲುವಿಕೆಯಿಂದ, ಕ್ಷೇತ್ರಕ್ಕೆ ತುಂಬಲಾರದ ನಷ್ಟವುಂಟಾಗಿದೆ.

ಜಿ.ಸುಬ್ಬರಾವ್ ಡಾ॥ಎ.ಆರ್.ಶೆಟ್ಟಿ
ಗುಡ್ಡೇತೋಟ ಜಯಪುರ
ಪದಾಧಿಕಾರಿಗಳು,
ಶ್ರೀ ಸದ್ಗುರು ವಿದ್ಯಾಸಮಿತಿ, ಬಸರೀಕಟ್ಟೆ.

ಕೊಪ್ಪ ತಾ॥ಗೆ ಸೀಮೆ ಎಣ್ಣೆ ಪಡಿತರ ವಿವರ

ಕೊಪ್ಪ : ಈ ತಾಲ್ಲೂಕಿಗೆ ಪ್ರತಿ ತಿಂಗಳ ನಂತೆಯೇ ಸೆಪ್ಟೆಂಬರ್ ತಿಂಗಳಿಗೆ 60 ಸಾವಿರ ಲೀ. ಸೀಮೆಯೆಣ್ಣೆ ಬಿಡುಗಡೆಯಾಗಿದ್ದು, ಗ್ರಾಮಾಂತರ ಪ್ರದೇಶದ ಎಲ್ಲಾ ನ್ಯಾಯ ಬೆಲೆ ಅಂಗಡಿಗಳಿಗೆ ಪ್ರತಿ ಪಡಿತರ ಚೀಟಿಗೆ ಮೂರು ಲೀಟರ್ ನಂತೆಯೂ, ಕೊಪ್ಪ ಪಟ್ಟಣ ಪ್ರದೇಶದ ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ಪಡಿತರ ಚೀಟಿಗೆ ಐದು ಲೀಟರ್ ನಂತೆಯೂ, ಮತ್ತು ಜಯಪುರ, ಹರಿಹರಪುರ ಹಾಗೂ ಕಮ್ಮರಡಿ ನ್ಯಾಯ ಬೆಲೆ ಅಂಗಡಿಗಳಿಗೆ ಪ್ರತಿ ಪಡಿತರ ಚೀಟಿಗೆ ನಾಲ್ಕು ಲೀಟರ್ ನಂತೆಯೂ ಮರು ಹಂಚಿಕೆ ಮಾಡಿರುವುದಾಗಿ ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ.

ಸೀಮೆಯೆಣ್ಣೆ ಮಾರಾಟ ಮಾಡದಿರುವಂತಹ ಕೆಲವು ನ್ಯಾಯಬೆಲೆ ಅಂಗಡಿಗಳ ಕಾರ್ಡುಗಳನ್ನು ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಸೇರಿಸಲಾಗಿದೆ. ಅದರಂತೆ ಬೊಮ್ಲಾಪುರ ನ್ಯಾಯಬೆಲೆ ಅಂಗಡಿ ವ್ಯಾಪ್ತಿಯ ಪಡಿತರ ಚೀಟಿದಾರರು ಹರಿಹರಪುರ ವಿಎಸ್‌ಎಸ್‌ಎನ್ ನಲ್ಲಿಯೂ, ಮೇಲ್‌ಬೆಳ್ರೆ ವ್ಯಾಪ್ತಿಯವರು ಅಸಗೋಡು ವಿಎಸ್‌ಎಸ್‌ಎನ್ ನಲ್ಲಿಯೂ, ಕಟ್ಟೆಹಕ್ಲು ವ್ಯಾಪ್ತಿಯವರು ಹಿರೇಗದ್ದೆ ವಿಎಸ್‌ಎಸ್‌ಎನ್ ನಲ್ಲಿಯೂ, ಎಲೆಮಡಲು ವ್ಯಾಪ್ತಿಯವರು ಹೇರೂರು ವಿಎಸ್‌ಎಸ್‌ಎನ್ ನಲ್ಲಿಯೂ ಕರ್ಕಿಕೊಂಡ ವ್ಯಾಪ್ತಿಯವರು ಗುಡ್ಡೇತೋಟ ಲ್ಯಾಂಪ್ ಸೊಸೈಟಿಯಲ್ಲಿಯೂ, ಹೆಗ್ಗಾರುಕೊಡಿಗೆಯವರು ಅಗಳಗಂಡಿ ಟಿ.ಎ.ಪಿ.ಸಿ.ಎಂ.ಎಸ್. ನಲ್ಲಿಯೂ, ಮೇಗೂರಿನವರು ಕೊಗ್ರೆ ಲ್ಯಾಂಪ್ ಸೊಸೈಟಿಯಲ್ಲಿಯೂ ಸೀಮೆ ಎಣ್ಣೆ ಪಡೆಯಲು ಸೂಚನೆ ನೀಡಲಾಗಿದೆ.

ನ್ಯಾಯಬೆಲೆ ಅಂಗಡಿಯವರು ಸಂಬಂಧಿಸಿದ ಪಡಿತರ ಚೀಟಿಗಳಿಗೆ ಮಾತ್ರ ಸೀಮೆ ಎಣ್ಣೆ ನೀಡಬೇಕೆಂದೂ, ಈ ಬಗ್ಗೆ ಯಾವುದೇ ಅಕ್ರಮ ವ್ಯವಹಾರದಿಂದ ಸೀಮೆ ಎಣ್ಣೆ ಕೃತಕ ಅಭಾವ ಉಂಟು ಮಾಡಿದಲ್ಲಿ ಅಂಥ ನ್ಯಾಯಬೆಲೆ ಅಂಗಡಿ ವಿರುದ್ಧ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಲಾಗುವುದೆಂದೂ ಎಚ್ಚರಿಸಿರುವ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಸಾರ್ವಜನಿಕರು ಸಹಾನುಭೂತಿಯಿಂದ ಸಹಕರಿಸಲು ಕೋರಿದ್ದಾರೆ.

ತಿದ್ದುಪಡಿ

ಕಾನೂರು ಗ್ರಾಮದ ನೀರಿನ ವಿವಾದದ ವಿಚಾರದಲ್ಲಿ ನಮ್ಮ 13.8 89ರ ಸಂಚಿಕೆಯ 4ನೇ ಪುಟದಲ್ಲಿ ಪ್ರಕಟವಾದ ಸದರಿ ಗ್ರಾಮಸ್ಥರ ಪತ್ರದಲ್ಲಿ, ಕುಡಿಯುವ ನೀರಿಗಾಗಿ ಹೈಡ್ರಾಲಿಕ್ ಪಂಪ್ ಹಾಕಿದಾಗ "ನಾವ್ಯಾರೂ ಆಕ್ಷೇಪಿಸಿರಲಿಲ್ಲ" ಎಂಬುದನ್ನು "ಆಗಲೇ ನಾವುಗಳು ಆಕ್ಷೇಪಿಸಿದ್ದೆವು" ಎಂದು ತಿದ್ದಿಕೊಳ್ಳುವುದು. —ಸಂ.

ಅಂಗಡಿ ಲೈಸೆನ್ಸ್ ನವೀಕರಣದ ಬಗ್ಗೆ ಸೂಚನೆ

ಕೊಪ್ಪ : ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಮೇರೆಗೆ ಎಲ್ಲಾ ಅಂಗಡಿ, ಹೋಟೆಲ್ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು ತಮ್ಮ ಸಂಸ್ಥೆಗಳ ಲೈಸೆನ್ಸನ್ನು 1990ನೇ ಸಾಲಿಗೆ ಇದೇ ಸೆಪ್ಟೆಂಬರ್ 30ರ ಒಳಗೆ ನವೀಕರಿಸಬೇಕು. ತಪ್ಪಿದಲ್ಲಿ ಕಾನೂನಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಇಲ್ಲಿನ ಹಿರಿಯ ಕಾರ್ಮಿಕ ನಿರೀಕ್ಷಕರಾದ ಇನಾಯತ್ ತಿಳಿಸಿದ್ದಾರೆ. ಸರ್ಕಾರದ ಆದೇಶದಂತೆ ಅರ್ಜಿ ಫಾರಂ ಎಎಗೆ 1ರೂ ಕೋರ್ಟ್ ಫೀ ಸ್ಟಾಂಪ್ ಲಗತ್ತಿಸಬೇಕು.

ಗದ್ದೆಗಳಲ್ಲಿ ಏಡಿ ನಿಯಂತ್ರಣಕ್ಕೆ ಸಲಹೆ

ಶೃಂಗೇರಿ: ಈ ತಾಲ್ಲೂಕಿನ ಗಂಡಗಟ್ಟೆ, ಕಿಗ್ಗ, ಕೆಲ್ಲಾರು ಗ್ರಾಮಗಳಲ್ಲಿ ಮುಂಗಾರು ಭತ್ತ ನಾಟಿ ಮಾಡಿ 10-15 ದಿನಗಳಾಗಿರುವ ಜಮೀನಿನಲ್ಲಿ ಅಲ್ಲಲ್ಲಿ ಏಡಿಗಳು ನಾಟಿ ಮಾಡಿರುವ ಸಸಿಗಳನ್ನು ಕತ್ತರಿಸಿ ಸಂಪೂರ್ಣ ಹಾಳು ಮಾಡಿರುವುದು ಕಂಡು ಬಂದಿದೆ.

ಇವುಗಳ ನಿಯಂತ್ರಣಕ್ಕೆ ಪ್ರತಿ ಎಕರೆಗೆ 5 ಕೆಜಿ ಥಿಮೆಟ್ ಹರಳನ್ನಾಗಲೀ ಅಥವಾ 8 ಕೆ.ಜಿ. ಕಾರ್ಬೋಫ್ಯೂರಾನ್ ಹರಳನ್ನಾಗಲೀ ಬಳಸಬೇಕೆಂದು ಸ॥ ಕೃಷಿ ನಿರ್ದೇಶಕರು ಸಲಹೆ ಮಾಡಿದ್ದಾರೆ.

ಈ ಕೀಟನಾಶಕಗಳನ್ನು ವಿಶೇಷ ಅಕ್ಕಿ ಉತ್ಪಾದನಾ ಯೋಜನೆಯನ್ವಯ ಶೇ. 50ರ ರಿಯಾಯ್ತಿ ದರದಲ್ಲಿ ರೈತರಿಗೆ ವಿತರಿಸಲು ಇಲ್ಲಿನ ತಾಲ್ಲೂಕ್ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ದಾಸ್ತಾನು ಮಾಡಲಾಗಿದ್ದು, ಅವಶ್ಯಕತೆ ಇರುವ ರೈತರು ಸಂಬಂಧಪಟ್ಟ ಕೃಷಿ ಸಹಾಯಕರಿಂದಾಗಲೀ ಅಥವಾ ಸಹಾಯಕ ಕೃಷಿ ಅಧಿಕಾರಿಗಳಿಂದಾಗಲೀ ಪರವಾನಗಿ ಪಡೆದು ಕೀಟ ನಾಶಕಗಳನ್ನು ಪಡೆದುಕೊಳ್ಳಬಹುದು.

ತಾ। ಕಾಂಗ್ರೆಸ್ ಸೇವಾದಳ ಅಧ್ಯಕ್ಷ ಅಸಗೋಡುನಾಗೇಶ್

ಕೊಪ್ಪ : ಇಲ್ಲಿಗೆ ಸೆ. 8-ರಂದು ಜಿಲ್ಲಾ ಕಾಂ। ಸೇವಾದಳ ಅಧ್ಯಕ್ಷ ಗುರುನಾಥ ಗೌಡ ಮತ್ತು ಇತರ ಪದಾಧಿಕಾರಿಗಳು ಭೇಟಿ ನೀಡಿ ದಳದ ತಾ॥ ಸಮಿತಿ ರಚಿಸಿದ್ದಾರೆ. ಅಧ್ಯಕ್ಷರಾಗಿ ಅಸಗೋಡು ನಾಗೇಶ್, ಮುಖ್ಯ ಸಂಘಟಕರಾಗಿ ಎಚ್. ಎಸ್. ಜಯಪ್ರಕಾಶ್, ಸಂಘಟಕರಾಗಿ ಎ ಎನ್. ರತ್ನಾಕರ್, ಕೋಶಾಧಿಕಾರಿಯಾಗಿ ಬಿ.ಎ. ರಾಧಾಕೃಷ್ಣ ಮತ್ತು 18 ಮಂದಿ ಸದಸ್ಯರು ಆಯ್ಕೆಯಾಗಿದ್ದಾರೆ.

ರೋಟರಿ ಗೌರ್ನರ್ ಭೇಟಿ

ಕೊಪ್ಪ : ಇಲ್ಲಿನ ರೋಟರಿ ಕ್ಲಬ್ಬಿಗೆ ರೋಟರಿ ಜಿಲ್ಲೆ 318ರ ರಾಜ್ಯಪಾಲ ಡಾ॥ ಶಿವಣ್ಣ ಸೆ. 8 ರಂದು ವಿಧ್ಯುಕ್ತ ಭೇಟಿ ನೀಡಿ, ಕ್ಲಬ್ಬಿನ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡಿದರು. ಖ್ಯಾತ ಸಮಾಜ ಸೇವಕಿ ಶ್ರೀಮತಿ ಬಸವಾನಿ ಸಾವಿತ್ರಮ್ಮನವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಬೇಕೆಂದು ಕ್ಲಬ್ ಸರ್ಕಾರಕ್ಕೆ ಶಿಫಾರ್ಸು ಮಾಡಿರುವುದನ್ನೂ, ಕೊಪ್ಪ ಬಸ್ ಸ್ಟ್ಯಾಂಡ್ ನಲ್ಲಿ ಅಂಗವಿಕಲರ ಟೆಲಿಫೋನ್ ಬೂತ್ ಸ್ಥಾಪಿಸಲಾಗುತ್ತಿರುವುದನ್ನೂ ತಿಳಿದು ಮೆಚ್ಚುಗೆ ವ್ಯಕ್ತಪಡಿಸಿದರು.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 6-9-1989
ಸರಕು : 3089-3480
ಬೆಟ್ಟೆ : 2400-2696
ಗೊರಬಲು : 1439-1731
ಸಾಗರ : 6.9.1989
ಇಡಿ : 2359-2529
ಚಾಲಿ : 2440-2635
ಆಪಿ : 3319-3531
ಸಿಪ್ಪೆ ಗೋಟು : 1130-1427

ಕಾಳು ಮೆಣಸು

ಸಾಗರ : ರೂ. 4239.

ಹಿಂದುಳಿದವರ ಬಲಿಷ್ಠ ಸಂಘಟನೆಗೆ ಯತ್ನ

(3ನೇ ಪುಟದಿಂದ)

ಹತ್ತಿಪ್ಪತ್ತು ವರ್ಷಗಳಾದರೂ ಚಿಂತೆಯಿಲ್ಲ, ಈ ಬಗ್ಗೂಡಿಸುವ 'ಹೋರಾಟ'ವನ್ನು ನಾವು ಮಾಡುತ್ತಲೇ ಹೋಗುತ್ತೇವೆ ಎಂದು ದ.ಸಂ.ಸ. ರಾಜ್ಯ ಸಂಚಾಲಕ ಚಂದ್ರಪ್ರಸಾದ್ ತ್ಯಾಗಿ ಹೇಳಿದರೆ, 'ದ.ಸಂ.ಸ. ರಾಜಕೀಯಕ್ಕಿಳಿಯುವುದು ಅದರ ಹೋರಾಟದ ಬದುಕಿನ ಆತ್ಮಹತ್ಯೆಯ ಆರಂಭ' ಎಂದ ಬರಗೂರರ ನಿಲುವನ್ನು ಪಿ ಲಂಕೇಶ್ ವಿರೋಧಿಸಿದರು. ಗಾಂಧೀಜಿ ಒಬ್ಬ ಉತ್ತಮ ಹೋರಾಟಗಾರರಾಗಿದ್ದಂತೆ ಉತ್ತಮ ರಾಜಕಾರಣಿಯೂ ಆಗಿದ್ದರೆಂದ ಅವರು, "ಯಾರ್ಯಾರನ್ನೋ ಚುನಾವಣೆಗೆ ನಿಲ್ಲಿಸಿ ಎಂದಲ್ಲೂ ಅಲ್ಲ; ಸರಿಯಾದವರನ್ನು ಹುಡುಕಿ ನಿಲ್ಲಿಸಿ ಗೆಲ್ಲಿಸಲು ಸಾಧ್ಯವಿದ್ದರೂ ಸುಮ್ಮನಿರಿ ಎಂಬುದೂ ಸರಿಯಲ್ಲ. ನಾವೆಲ್ಲ ಈಗೊಂದು ಐತಿಹಾಸಿಕ ಸಂದರ್ಭದಲ್ಲಿದ್ದೇವೆ ...ನಾಗಿ ಯೋಚಿಸಿ ದಿಟ್ಟವಾದ ನಿರ್ಧಾರ ...ಕೊಳ್ಳಬೇಕಿದೆ" ಎಂದು ಕರೆ ಕೊಟ್ಟ

ದಲಿತ ಸಂಘರ್ಷ ಸಮಿತಿಗೆ ಚುನಾವಣೆ ...ಒಂದು ಹೋರಾಟವೆಂದ ನಾಯಕ ಪ್ರೊ॥ ಬಿ. ಕೃಷ್ಣಪ್ಪ ಅವರು, ಈ ಹೋರಾಟದ ಮೂಲಕ ವಿಧಾನ ಸಭೆ, ಸಂಸತ್‌ಗಳನ್ನು ಶುದ್ಧೀಕರಿಸುತ್ತ ನಮ್ಮ ಹೋರಾಟದ ನೆಲೆಯನ್ನೂ ವಿಸ್ತರಿಸಲು ಯತ್ನಿಸಬೇಕಾಗಿದೆ ಎಂದರು. ನಮಗೆ ಪ್ರಾಮಾಣಿಕ ಹೃದಯ ಇದೆ, ಹೋರಾಟದ ಅನುಭವ, ಬಲ ಇದೆ. ಆದ್ದರಿಂದ ಯಾರಿಗೂ ಆತಂಕ ಬೇಡ ಎಂದ ಅವರು, ಹೋರಾಟ-ಶಾಸನ ಸಭೆಗಳೆರಡರಲ್ಲೂ ಧೀಮಂತರಾಗಿ ಮಿಂಚಿದ ಶಾಂತವೇರಿ ಗೋಪಾಲಗೌಡರನ್ನು ಸ್ಮರಿಸಿದರು.

ಒಕ್ಕೂಟವನ್ನು ವಿಶಾಲ ತಳಹದಿಯ ಮೇಲೆ ಸಂಘಟಿಸಲು ಸಿದ್ಧತೆಯಾಗಿ 5 ಜನರ ಒಂದು ತಾತ್ಕಾಲಿಕ ಸಮಿತಿ ರಚಿಸಲಾಯಿತು. ಎಲ್ಲಾ ಜಿಲ್ಲೆಗಳಲ್ಲೂ ಸಮ್ಮೇಳನ, ವಿಚಾರ ಸಂಕಿರಣ ನಡೆಸಿ, ತಾತ್ಕಾಲಿಕ ಸಮಿತಿಗಳನ್ನು ರಚಿಸಿ, ಅಂತಿಮವಾಗಿ ರಾಜ್ಯ ಮಟ್ಟದಲ್ಲಿ ಒಕ್ಕೂಟವನ್ನು ಸಂಘಟಿಸಲು ತೀರ್ಮಾನಿಸಲಾಯಿತು. ಇದರನ್ವಯ ಚಿಕ್ಕಮಗಳೂರಿನಲ್ಲಿ ಸೆ. 10ರಂದು ಜಿಲ್ಲಾ ಸಮ್ಮೇಳನ ಏರ್ಪಾಡಾಗಿದೆ.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ